ಶ್ರೀ ಎಂ. ಎನ್. ನಾಗನೂರ್.—ಇದಕ್ಕೆ ಸಾಕಷ್ಟು ನೀರು ಬರುತ್ತದೆ. ಅಚ್ಚುಕಟ್ಟು ಇದ್ದದ್ದು 743 ಎಕರೆ. 390 ಯೂನಿಟ್ ನೀರು ಬರುತ್ತದೆ. ಹೆಚ್ಚು ನೀರು ಅನಾವಶ್ಯಕ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ನೀರು ಇಲ್ಲದೆ ಬೆಳೆ ಒಣಗಿ ಹೋಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri H. M. CHANNABASAPPA.—The question is about feeder channel from Yeldur Doddakere to Santhammanakere. The estimate is Rs 17,500 and the water that is going to be impounded is about 7 units. Per unit, it will work out to about Rs. 2,500. Therefore, it has been found to be prohibitively costly and therefore it has been ordered to be dropped in the year 1954.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕೆರೆಗೆ ಸಾಕಷ್ಟು ನೀರು ಇಲ್ಲ ಎಂದು ಜನಗಳು ಈಗಲೂ ಮೊರೆಯಿಡುತ್ತಾರೆ. ಬೆಳೆ ಒಣಗಿ ಹೋಗುತ್ತಿದೆ. ಆದ್ದರಿಂದ ಸರ್ಕಾರದವರು ಈಗಲಾದರೂ ಕೆಲಸ ಮಾಡಬಲ್ಲರೇ?

Sri H. M. CHANNABASAPPA.—It is true that though there is need for water, we cannot take up prohibitively costly projects. Anyway, I have no objection to have it investigated and the possibility of providing water at lower cost will be examined.

Gram Sevakas and Gram Sevikas in South Kanara District.

*Q.—550. Sri MANJAPPA ULLAL (Karkal).—

Will the Government be pleased to state :—

(*a*) the number of Gram Sevakas and Gram Sevikas working in South Kanara District ;

(*b*) the Salary, D.A., and T.A. paid to them ;

(*c*) whether they have been given the benefit of revised Pay Scales ?

*A.—Sri H. C. LINGA REDDY (Deputy Minister for Planning and Development).—

(*a*) *Gramasevaks* : 124 *Gramasevikas* 7

(*b*) (i) There were two grades in erstwhile Madras for Gramasevaks :

(1) I Gr. Rs. 80—5—140.

(2) II Gr. Rs. 45—3—60—5—90.

(ii) D.A. has been given as per rates sanctioned in G.O. No. FL (B) 14034-14133 Bud, 119-56-3, dated 25th January 1957. Same is noted below :—

Cities and Towns with a population of one lakh and above	*Other place*
Rs.	Rs.
1. For Rs. 80 and below 30	25
2. More than 80 but not more than Rs. 100. 35	30
3. More than 100 but more than Rs. 150. 40	35

(iii) They are getting F.T.A. of Rs. 15 per month.

(*c*) Government have passed orders in Government Order No. GAD/76/DIF/58, dated 20th November 1958 that in the case of certain categories of posts, pay may be fixed on provisional equations and the Divisional Commissioners and Deputy Commissioners have been requested to take action accordingly.

ಶ್ರೀ ಮಂಜಪ್ಪ ಉಳ್ಳಾಲ್.—ಗ್ರಾಮಸೇವಕರು ಮತ್ತು ಗ್ರಾಮ ಸೇವಕಿಯರ ಕ್ವಾಲಿಫಿಕೇಷನ್ನಿನಲ್ಲಿ ವ್ಯತ್ಯಾಸಗಳಿವೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೆಲವರು ಎಸ್. ಎಸ್. ಎಲ್. ಸಿ. ಮಾಡಿರುತ್ತಾರೆ. ಮತ್ತೆ ಕೆಲವರು ಎಲ್. ಎ. ಜಿ.; ಬಿ. ಎ. ಜಿ., ಮಾಡಿದವರು ಇರುತ್ತಾರೆ. ಹೀಗೆ ಗ್ರಾಜುಯೇಟುಗಳೂ ಇದ್ದು ಕ್ವಾಲಿಫಿಕೇಷನ್ನಿನಲ್ಲಿ ವ್ಯತ್ಯಾಸವಿದೆ.

ಶ್ರೀ ಮಂಜಪ್ಪ ಉಳ್ಳಾಲ್.—ಹಳೆಯ ಮದ್ರಾಸು ಪ್ರದೇಶದಲ್ಲಿ ಎಸ್. ಎಸ್. ಎಲ್. ಸಿ. ಮಾಡಿದವರು ಡೆವಲಪ್‌ಮೆಂಟ್ ಕಮಿಷನರಾಗಿ ಕೆಲಸ ಮಾಡುತ್ತಿದ್ದು, ಈಗ ಮೈಸೂರು ಪ್ರಾಂತಕ್ಕೆ ಬಂದ ಕೂಡಲೇ ಅವರು ಗ್ರಾಜುಯೇಟ್ ಆಗಿರಬೇಕೆಂದು ಹೇಳಿದರೆ ಎಕ್. ಯಿ. ಎಸ್. ತತ್ವಕ್ಕೆ ವಿರೋಧವಾಗುವುದಿಲ್ಲವೇ?

ಶ್ರೀ ಎಸ್. ಸಿ. ಲಿಂಗಾರೆಡ್ಡಿ.—Minimum qualification S. S. L. C. ಎಂದ ಮಾತ್ರಕ್ಕೆ ಎಲ್. ಎ. ಜಿ. ಮತ್ತು ಬಿ. ಎ. ಜಿ. ಇರಕೂಡದು ಎಂದು ಅರ್ಥವಲ್ಲ. ಆ ಕ್ವಾಲಿಫಿಕೇಷನ್ನಿರುವವರು ಬಂದರೆ ಅವರನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ಮಂಜಪ್ಪ ಉಳ್ಳಾಲ್.—ಗ್ರಾಮ ಸೇವಕರ ಪ್ರೊವಿಷನಲ್ ಈಕ್ವೇಷನ್ ಬಗ್ಗೆ ಡಿವಿಜನಲ್ ಕಮಿಷನರ್ ಡೆಪ್ಯುಟಿ ಕಮಿಷನರಿಗೆ ಹುಕುಂ ಕೊಟ್ಟಿದ್ದೀರೆಂದು ತಿಳಿಸಿರುತ್ತೀರಿ. ಆದರೆ ಅವರು ಯಾವ ತರಹ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಈಕ್ವೇಷನ್ ವಿಷಯದಲ್ಲಿ ನವೆಂಬರ್ 1958ರಲ್ಲಿ ಒಂದು ಆರ್ಡ್ಜ್ ಮಾಡಿದೆ. ಅದರ ಪ್ರಕಾರ ಕೆಲವು ಅಪಾಯಿಂಟು ಮೆಂಟುಗಳಿಗೆ ಪ್ರೊವಿಷನಲ್ ಆಗಿ ಈಕ್ವೇಷನ್ ಕೊಡ

ಬಹುದು. ಆ ಅಜ್ಜೆಯನ್ನು ಜಾರಿಗೆ ಕೊಡಬೇಕೆಂದು ಡಿವಿಷನಲ್ ಕಮಿಷನರಿಗೆ ಮತ್ತು ಡೆಪ್ಯುಟಿ ಕಮಿಷನರಿಗೆ ಸೂಚನೆ ಕೊಡಲಾಗಿದೆ.

ಶ್ರೀ ಮಂಜಪ್ಪ ಉಳ್ಳಾಲ್.—ಅವರುಗಳು ಒರಿಜನಲ್ ಪೇ ಸ್ಕೇಲುಗಳನ್ನು ಪಡೆಯುತ್ತಿದ್ದಾರೋ, ಅಥವಾ ಬೇಸಿಕ್ ಪೇ ಏನಿದೆಯೋ ಅದನ್ನು ಪಡೆಯುತ್ತಿದ್ದಾರೋ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸೌತ್ ಕೆನರಾದಲ್ಲಿ ರಿವೈಸ್ಡ್ ಸ್ಕೇಲನ್ನು ಗ್ರಾಮ ಸೇವಕರಿಗೆ ಕೊಡಬಹುದೆಂದು ಸೂಚನೆ ಕೊಟ್ಟಿದ್ದೇವೆ. ಆ ಅಜ್ಜೆಯನ್ನು ಜಾರಿಗೆ ತರಬೇಕೆಂದೂ ಹೇಳಿದ್ದೇವೆ.

Sri Y. MANJAYA SHETTY.—Is it not a fact that the scale of First Grade Gramasevaks are not revised and that they are the same as those of Second Grade Gramasevaks as per the revised scales of pay announced?

Sri H. C. LINGA REDDY.—Agricultural graduates will be started on Rs. 100 in grade Rs. 80-5-100-8-140-10-200; and non-graduates' grade is Rs. 50-3-80-4-120-5-150.

Sri J. B. MALLARADHYA.—As a result of the directive given by the Government on 20th November 1958, how many Divisional Commissioners and Deputy Commissioners have given effect to that order?

Sri H. C. LINGA REDDY.—Instructions have been issued and we have not received any reports with regard to how many gramasevaks' revised pay scales have been given effect to.

Sri J. B. MALLARADHYA.—Should not a time limit be fixed for implementing your orders ? That is the bane of the administration.

Sri H. C. LINGA REDDY.—Hon'ble Member's suggestion will be borne in mind.

Sri Y. MANJAYA SHETTY.—Is the Government aware that in the erstwhile Madras State all the first grade gramasevaks are non-graduates and if so, will the Government consider the desirability of revising the pay scales of first grade gramasevaks who are non-graduates also?

Sri H. C. LINGA REDDY.—That will be considered.

ಶ್ರೀ ಮಂಜಪ್ಪ ಉಳ್ಳಾಲ್.—ಈ 124 ಗ್ರಾಮ ಸೇವಕರನ್ನು ಮತ್ತು ಏಳು ಗ್ರಾಮ ಸೇವಕಿಯರನ್ನು ಪ್ರಾಪ್ಯುಲೇಷನ್ ಬೇಸಿಸ್ ಮೇಲೆ ಅರಿಸಿದ್ದೀರೋ ಅಥವ ಜೂರಿಸ್‌ಡಿಕ್ಷನ್ ಮೇಲೆ ಅರಿಸುತ್ತಿದ್ದೀರೋ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದು ಪ್ರತ್ಯೇಕವಾದ ಪ್ರಶ್ನೆ. ಈಗ ಗ್ರಾಮ ಸೇವಕರನ್ನು ಪಿ.ಎಸ್.ಸಿ. ಯವರು ಸೆಲೆಕ್ಟ್ ಮಾಡಬೇಕೆಂದು ಗವರ್ನ್‌ಮೆಂಟಿನವರು ತೀರ್ಮಾನ ಮಾಡಿದ್ದಾರೆ ಆ ಪ್ರಕಾರ ಪಿ. ಎಸ್. ಸಿ. ಯವರು ನೇಮಿಸುತ್ತಾರೆ.

ಶ್ರೀ ಕುಂದೂರು ರುದ್ರಪ್ಪ.—ಗ್ರಾಮ ಸೇವಕರು ಮತ್ತು ಗ್ರಾಮ ಸೇವಕಿಯರ ಕೆಲಸವೇನು?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಗ್ರಾಮ ಸೇವಕರ ಮತ್ತು ಗ್ರಾಮ ಸೇವಕಿಯರ minimum qualification S.S.L.C. ಎಂದು ಈಗಾಗಲೇ ಹೇಳಿದ್ದೇನೆ ಇಷ್ಟು ಮಟ್ಟಿದ ಶಿಕ್ಷಣವಿರುವದರಿಂದ, ಅವರು ವ್ಯವಸಾಯ, ಸಹಕಾರ, ಗ್ರಾಮಾಭಿವೃದ್ಧಿ, ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿ, ಮತ್ತು ಅನೇಕ ವಿಷಯಗಳಲ್ಲಿ ಕೆಲಸ ಮಾಡಬೇಕೆಂಬ ಯೋಜನೆ ಇದೆ. ಈ ಯೋಜನೆಯ ಪ್ರಕಾರ ಅವರಿಗೆ 10-15 ಹಳ್ಳಿಗಳನ್ನು ಕೊಟ್ಟಿರುತ್ತಾರೆ. ಆ ಹಳ್ಳಿಗಳ ಅಭಿವೃದ್ಧಿಗೆ ಕೆಲಸ ಮಾಡುತ್ತಾರೆ.

Sri C. J. MUCKANNAPPA.—My question is also the same. We want to know the functions and duties of the gramasevakas and gramasevikas ?

Mr. DEPUTY SPEAKER.—The question relates to pay scales of gramasevaks and gramasevikas.

ಶ್ರೀಮತಿ ಅನ್ನಪೂರ್ಣಬಾಯಿ ರಾಗಚೇ.—ನೀವು ಕೊಟ್ಟಿರುವ ಸಂಖ್ಯೆಯಲ್ಲಿ ಹರಿಜನರೂ ಸೇರಿದ್ದಾರೋ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎಲ್ಲಾ ಜಾತಿಯವರೂ ಇರುತ್ತಾರೆ. ಹರಿಜನರೂ ಇರುತ್ತಾರೆ.

National Extension and Block Development Schemes for Udipi Taluk, South Kanara District.

*Q.—561. Sri GAJANAN PANDIT (Mangalore II) [on behalf of SRI JAGAJJEEVANDAS SHETTY (Brahmavar)].—

Will the Government be pleased to state :—

(*a*) whether the National Extension Schemes or Block Development Schemes have been taken up in Udipi Taluk, South Kanara District ;

(*b*) if not, the reasons for the delay ?

A.—Sri H. C. LINGA REDDY (Deputy Minister for Planning and Development).—

(*a*) No.